ಓ ಎಸ್ ನಂ. 766/2023

**ಪಿಡಬ್ಲ್ಯು–2**

**ದಿನಾಂಕ 27-07-2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ. ಆರ್ ಎಫ ಸಿ ವಕೀಲರರಿಂದ**

1. ನಾನು ಸಾಕ್ಷ್ಯ ಹೇಳಲು ನ್ಯಾಯಾಲಯದಿಂದ ನನಗೆ ನೋಟಿಸು ಬಂದಿರಲಿಲ್ಲ. ನನ್ನನ್ನು ಜಗದ ಮಾಲೀಕರು ಸಾಕ್ಷಿ ಹೇಳಲು ಕರೆಸಿರುತ್ತಾರೆ. ದಾವಾ ಆಸ್ತಿಯ ನಂಬರ್ 67 ಇರುತ್ತದೆ. ಆ ಆಸ್ತಿಯ ಅಗಲ ಉದ್ದ ನನಗೆ ಗೊತ್ತಿಲ್ಲ. ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಶಿವಪುತ್ರಪ್ಪ ರೊಟ್ಟಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಮತ್ತು ಆ ಕಡೆ ಕರಿಯಪ್ಪ ವಾಲೀಕಾರ ಅವರ ಜಮೀನು ಇದೆ. ಆ ಆಸ್ತಿಯ ಚೆಕಬಂದಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. ಪಶ್ಚಿಮಕ್ಕೂ ಮತ್ತು ಉತ್ತರಕ್ಕೂ ಕರಿಯಪ್ಪ ವಾಲೀಕಾರ ಅವರ ಜಮೀನು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಜಮೀನನ್ನು ಮಂಜೂರು ಮಾಡಲು ಅರ್ಜಿ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನಮ್ಮ ಹಿರಿಯರ ಕಾಲದಿಂದಲೂ ಹುಲಿಕಟ್ಟಿಯಲ್ಲಿ ವಾಸವಾಗಿರುತ್ತೇನೆ. ನನ್ನ ಆಸ್ತಿಯು ನಮ್ಮ ಸ್ವಂತ ಆಸ್ತಿ ಇರುತ್ತದೆ. ವಾದಿಯರು ಮೂಲತಃ ಬಾಡ ಗ್ರಾಮದವರು ಎಂದರೆ ಸರಿ. ಬಾಡ ಗ್ರಾಮದಿಂದ ವಾದಿಯರು ದಾವಾ ಆಸ್ತಿಗೆ ಎಷ್ಟು ವರ್ಷಗಳಿಂದ ಬಂದರು ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಯು ವಾದಿಯರಿಗೆ ವಾಸವಾಗಿರಲು ಜಾಗ ಕೊಟ್ಟಿದ್ದರು ಎಂದರೆ ನಾವು ನೋಡಿದಾಗಿನಿಂದಲೂ ವಾದಿಯರು ಅಲ್ಲಿಯೇ ವಾಸವಾಗಿರುತ್ತಾರೆ. ವಾದಿಯು ವಾಸವಾಗಿರುವ ಮನೆಯು ಅವರದೇ ಎಂದರೆ ಸರಿ. ಇನ್ನೊಂದು ಮನೆಯಲ್ಲಿ ವಾದಿಯರು ಕೃಷಿ ಉಪಕರಣ ಇಟ್ಟುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮನೆಯನ್ನು ಪ್ರತಿವಾದಿಯರಿಗೆ ಉಳಿದುಕೊಳ್ಳಲು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ಯಾರು ಯಾರ ವಿರುದ್ಧ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇರದೇ ಇದ್ದರೂ ವಾದಿಗೆ ಅನುಕೂಲವ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಓ ಎಸ್ ನಂ. 766/2023**

**ಪಿಡಬ್ಲ್ಯು –2**

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

ಪ್ರಧಾನ **ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**